# ಏಕೆ ವೃಂದಾವನ ಸಾಕು ಗೋಕುಲವಾಸ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 117.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 126
3. **Note:** Lyrics in both the above references are almost same. However, the lyrics given here are as per Ref. 1.

ರಾಗ: ಮೋಹನ ತಾಳ: ಝಂಪೆ

ಏಕೆ ವೃಂದಾವನವು ಸಾಕು ಗೋಕುಲವಾಸ
ಏಕೆ ಬಂದೆಯೊ ಉದ್ಧವಾ || ಪ ||

ಸಾಕು ಸ್ನೇಹದ ಮಾತನೇಕ ಮಹಿಮನು ತಾನು
ಆ ಕುಬುಜೆಯನು ಕೂಡಿದ, ಉದ್ಧವಾ || ಅಪ ||

ಬಿಲ್ಲು ಬಿಳಿಯಯ್ಯನ ಬೇಟ ನಗೆ-ನುಡಿ ನೋಟ
ಇಲ್ಲದಂತಾಯಿತಲ್ಲ
ಎಲ್ಲರಿಂದಗಲಿಸಿದ ಕ್ರೂರ ಅಕ್ರೂರನವ
ವಲ್ಲಭನ ಒಯ್ದನಲ್ಲ
ಮಲ್ಲರನು ಮರ್ದಿಸುತ ಮಾವ ಕಂಸನ ಕೊಂದ
ಫುಲ್ಲನಾಭನ ತಂದು ತೋರ್ರೈ, ಉದ್ಧವಾ || ೧ ||

ಅನುದಿನೊಳಾದರಿಸಿ ಅಧರಾಮೃತವನಿತ್ತು
ಇನಿದಾದ ಮಾತುಗಳಲಿ
ಮನದ ಮರ್ಮವ ತಿಳಿದ ಮನಸಿಜ-ಪಿತನ ಸಖವು
ಮನಸಿಜನ ಕೇಳಿಯಲ್ಲಿ
ಕನಸಿನಲಿ ಕಂಡ ತೆರನಾಯಿತಾತನ ಕಾಂಬು-
ವನಕ ಬದುಕುವ ಭರವಸೆ ಹೇಳು, ಉದ್ಧವಾ || ೨ ||

ಕರುಣನಿಧಿಯೆಂಬುವರು ಕಪಟ ನಾಟಕದರಸು
ಸರಸ ವಿರಸವ ಮಾಡಿದ
ಸ್ಮರಿಸಿದವರನು ಕಾಯ್ವ ಬಿರುದುಳ್ಳ ಸಿರಿ-ರಮಣ
ಮರೆದು ಮಧುರೆಯ ಸೇರಿದ
ಪರಮ ಭಕ್ತರ ಪ್ರೀಯ ಪುರಂದರ ವಿಠಲನ
ನೆರೆಗೂಡಿಸೈ ಕೋವಿದ, ಉದ್ಧವಾ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಬಿಲ್ಲು ಹಬ್ಬದಲ್ಲಿ ಶ್ರೀ ಕೃಷ್ಣನು ಎಲ್ಲ ಪಣಗಳನ್ನೂ ಜಯಿಸಿ, ಮಾವ ಕಂಸನನ್ನು ಸಂಹರಿಸಿ, ವಸುದೇವ-ದೇವಕಿಯರ ಸೆರೆ ಬಿಡಿಸಿದನು. ತಾಯಿಯ ಅಪೇಕ್ಷೆಯಂತೆ ಆತನು ಮಧುರೆಯಲ್ಲಿಯೇ ನಿಂತುಕೊಂಡನು. ಆದರೂ ಗೋಪಿಯರ ಯೋಗಕ್ಷೇಮದ ವಿಚಾರ ಆತನನ್ನು ಬಿಡಲಿಲ್ಲ. ಆತನು ಉದ್ಧವನನ್ನು ಗೋಕುಲಕ್ಕೆ ಕಳಿಸಿ, ಗೋಪಿಕಾಸ್ತ್ರೀಯರ ಇರವನ್ನು ತಿಳಿದುಕೊಂಡು ಬರುವುದಕ್ಕಾಗಿ ತಿಳಿಸಿದಾಗ, ಗೋಪಿಕಾಸ್ತ್ರೀಯರು ಉದ್ಧವನನ್ನು ಕಂಡು ಆಡಿದ ಮಾತುಗಳು.

**ಬಿಲ್ಲುಬಿಳಿಯ** = ಬೆಳ್ಳಬ್ಬು ಬಿಲ್ಲಾದವ, ಕಾಮ

**ಬೇಟ** = ವಿರಹ

**ಮನಸಿಜ ಪಿತ** = ಕೃಷ್ಣ

**ಕೋವಿದ** = ಚತುರ

**ತೆರನಾಯಿತಾತನ ಕಾಂಬುವನಕ** = ತೆರನಾಯಿತು ಆತನ ಕಾಣುವ ತನಕ

**Classification:** Keerthane
**Ankita:** purandara vittala
**Location:** NA
**Category:** Krishna Leele
**Sub-Category:** Krishna, akrura, gopi, uddhava, kamsa, billu, manmatha, Mathura, gokula, mitra, nage, vrundavana, amruta, mana, kanasu, karuna, arasa, smarane,
**Pravachana:** NA
**Explanation:** NA